ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ರಘುನಾಥ್ ರಾವ್ ಮಲ್ಕಾಪೂರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1106

ಉತ್ತರಿಸಬೇಕಾದ ದಿನಾಂಕ : 29.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೀದರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ರೈತರು ಸಾಲಕ್ಕೆ ಸಹಕಾರ ಸಂಘಗಳಲ್ಲಿ ಸಲ್ಲಿಸಿದ ಅರ್ಜಿಗಳು ಎಷ್ಟು; ನೀಡಿರುವ ಸಾಲ ಎಷ್ಟು;	ಬೀದರ ಜಿಲ್ಲೆಯಲ್ಲಿ ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಬೆಳೆ ಸಾಲಕ್ಕಾಗಿ 2018-19 ರಲ್ಲಿ 1,51,818 ರೈತರು ಮತ್ತು 2019-20 ರಲ್ಲಿ 1,39,703 ರೈತರು ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ಕ್ರಮವಾಗಿ ರೂ.780.73 ಕೋಟಿ ಮತ್ತು ರೂ.724.22 ಕೋಟಿಗಳ ಸಾಲ ವಿತರಿಸಲಾಗಿದೆ. ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಕ್ಕಾಗಿ 2018-19 ರಲ್ಲಿ 828 ರೈತರು ಮತ್ತು 2019-20 ರಲ್ಲಿ 699 ರೈತರು ಅರ್ಜಿ ಸಲ್ಲಿಸಿದ್ದು, ಈ ಪೈಕಿ ಕ್ರಮವಾಗಿ 774 ರೈತರಿಗೆ ರೂ. 11.88 ಕೋಟಿ ಮತ್ತು 679 ರೈತರಿಗೆ ರೂ. 9.98 ಕೋಟಿಗಳ ಸಾಲ ವಿತರಿಸಲಾಗಿದೆ.
ಆ)	ಎಲ್ಲಾ ರೈತರಿಗೆ ಸಾಲ ನೀಡದಿರಲು ಕಾರಣಗಳೇನು; (ತಾಲ್ಲೂಕುವಾರು ಮಾಹಿತಿ ನೀಡುವುದು)	ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಎಲ್ಲಾ ರೈತರಿಗೂ ಸಾಲ ವಿತರಿಸದೇ ಇರುವ ಕಾರಣಗಳನ್ನು ಈ ಕೆಳಗೆ ನೀಡಿದ್ದು, ತಾಲ್ಲೂಕವಾರು ವಿವರವನ್ನು ಅನುಬಂಧ ದಲ್ಲಿ ನೀಡಲಾಗಿದೆ. 1) ಬೇರೆ ಬ್ಯಾಂಕಿನ ಋಣ ಭಾರವಿರುವುದು 2) ಜಂಟಿ ಭೂಮಿಯಿದ್ದು ತಕರಾರು ಅರ್ಜಿ ಸಲ್ಲಿಸಿರುವುದು. 3) ಸ್ಕೇಲ್ ಆಫ್ ಫೈನಾನ್ಸನ ಆಧಾರದಂತೆ ಹೊಂದಿರಬೇಕಾದ ಕೃಷಿ ಭೂಮಿ ಇಲ್ಲದಿರುವುದು.
ಇ)	ಹಾಗಿದ್ದಲ್ಲಿ, ಈ ವರ್ಷ ಜಿಲ್ಲೆಯ ರೈತರ ಬೇಡಿಕೆಗೆ ತಕ್ಕಂತೆ ಸಾಲ ನೀಡಲಾಗುವುದೇ ? (ಸ್ಪಷ್ಟ ವಿವರ ಒದಗಿಸುವುದು)	2020-21 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ 1,60,000 ರೈತರಿಗೆ ರೂ.857 ಕೋಟಿಗಳ ಅಲ್ಪಾವಧಿ ಬೆಳೆ ಸಾಲ ಮತ್ತು 750 ರೈತರಿಗೆ ರೂ.25.00 ಕೋಟಿಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ವಿತರಿಸುವ ಗುರಿಯನ್ನು ಹೊಂದಲಾಗಿದ್ದು, ಮಾರ್ಚ್ 2021 ರೊಳಗೆ ಗುರಿ ತಲುಪಲು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಸಂಖ್ಯೆ: ಸಿಒ 364 ಸಿಎಲ್ಎಸ್ 2020

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ರಘುನಾಥ್ ರಾವ್ ಮಲ್ಕಾಪುರ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1106 ಕ್ಕೆ

ಅನುಬಂಧ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರು ಕೃಷಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಮತ್ತು ವಿತರಿಸಿದ ಸಾಲದ ವಿವರ(ರೂ.ಲಕ್ಷಗಳಲ್ಲಿ)

ಕ್ರ.ಸಂ	ತಾಲೂಕಿನ ಹೆಸರು	ಕಾರ್ಯನಿರ್ವಹಿಸುತ್ತಿರುವ ಒಟ್ಟು ಪ್ಯಾಕ್ಸ್ ಗಳು	ವಾರ್ಷಿಕ ಸಾಲು											
			2018-19ನೇ ಸಾಲು						2019-20ನೇ ಸಾಲು					
			ಅಲ್ಪಾವಧಿ ಕೃಷಿ ಸಾಲ			ಮಧ್ಯಮಾವಧಿ ಕೃಷಿ ಸಾಲ			ಅಲ್ಪಾವಧಿ ಕೃಷಿ ಸಾಲ			ಮಧ್ಯಮಾವಧಿ ಕೃಷಿ ಸಾಲ		
			ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು	ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ	ಸಾಲ ಪಡೆದ ಒಟ್ಟು ಮೊತ್ತ	ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು	ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ	ಸಾಲ ಪಡೆದ ಒಟ್ಟು ಮೊತ್ತ	ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು	ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ	ಸಾಲ ಪಡೆದ ಒಟ್ಟು ಮೊತ್ತ	ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು	ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ	ಸಾಲ ಪಡೆದ ಒಟ್ಟು ಮೊತ್ತ
1	ಬೀದರ	39	23835	23835	13260.87	209	184	264.53	21386	21386	11562.77	183	177	229.59
2	ಹುಮನಾಬಾದ	28	26988	26988	14151.43	91	84	143.75	24778	24778	12879.53	72	68	112.06
3	ಬಸವಕಲ್ಯಾಣ	32	29630	29630	13606.12	175	173	284.37	28534	28534	12811.12	140	137	217.90
4	ಭಾಲ್ಕಿ	36	38005	38005	19675.70	174	162	226.23	33329	33329	18372.20	133	132	203.5
5	ಔರಾದ(ಬಿ)	36	33360	33360	17378.65	179	171	269.53	31676	31676	16796.19	171	165	234.89
ಒಟ್ಟು		171	151818	151818	78072.77	828	774	1188.41	139703	139703	72421.81	699	679	997.94

ಸಹಕಾರ ಸಂಘಗಳ ಅಪರ ನಿಬಂಧಕರು

(ಪತ್ತು)